# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಕ್ಷಿಣ ವಲಯ

## ಬೈರಸಂದ್ರ , ಹೊಸ ವಾರ್ಡ್ ಸಂಖ್ಯೆ: 196 (ಹಳೆಯ ವಾರ್ಡ್ ಸಂಖ್ಯೆ: 168 & 169)

**ದಿನಾಂಕ: 07.12.2022 ರಂದು ಹೊಸ ವಾರ್ಡ್ ಸಂಖ್ಯೆ 196 ಬೈರಸಂದ್ರ ವಾರ್ಡ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆ:**

## -: ಸಮಿತಿ ಸಭೆಯ ನಡವಳಿಗಳು :-

ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಮತ್ತು ವಾರ್ಡ್ ಸಮಿತಿ ಸದಸ್ಯರು:-

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 01 | ಶ್ರೀ ವಾಲು ರಾಥೋಡ್ | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| 02 | ಶ್ರೀ ಚಂದ್ರಶೇಖರ್ ವಿ | ಕಾರ್ಯದರ್ಶಿ ಮತ್ತು ಸಂಚಾಲಕರು |
| 03 | ಶ್ರೀ ಎನ್. ನಾಗರಾಜ್ | ವಾರ್ಡ್-169ರ ಮಾಜಿ ಸದಸ್ಯರು ಬೃ.ಬೆಂ.ಮ.ಪಾಲಿಕೆ |
| 04 | ಶ್ರೀಮತಿ ಪೂನಂ.ಬಿ.ಡಿ | ಹಿರಿಯ ಆರೋಗ್ಯ-169 ನಿರೀಕ್ಷಕರು, ಬಿ.ಬಿ.ಎಂ.ಪಿ |
| 05 | ಶ್ರೀ ರಾಮಚಂದ್ರ .ಸಿ | ಹಿರಿಯ ಆರೋಗ್ಯ-168 ನಿರೀಕ್ಷಕರು, ಬಿ.ಬಿ.ಎಂ.ಪಿ |
| 06 | ಕುಮಾರಿ ವಿಶಾಲಕ್ಷಿ ಬಂಡಿ | ಸಹಾಯಕ ಅಭಿಯಂತರರು ವಾರ್ಡ್ -168 |
| 07 | ಶ್ರೀಮತಿ ಡಾ. ಹಲೀಮ್ ಸಾರ | MO-168, ಆರೋಗ್ಯ ಇಲಾಖೆ, ಬಿ.ಬಿ.ಎಂ.ಪಿ |
| 08 | ಶ್ರೀ ಗೌತಮ್.ವೈ | SWM-168 |
| 09 | ಶ್ರೀ ನವೀನಕುಮಾರ್.ಪಿ | Ward Marshal |
| 10 | ವಿಜಯಕುಮಾರ.ಜಿ | BESCOM JE |
| 11 | ಶ್ರೀ ಕವಿರಾಜ್.ಕೆ | Ward Marshal-169 |
| 12 | ಶ್ರೀ ರಮೇಶ.ವಿ.ಬಿ | SWM-169 |
| 13 | ಶ್ರೀ ವಿಜಯ್ ಹೆಚ್.ಬಿ | ಸ.ಅ, SWD |
| 14 | ಶ್ರೀ ಪ್ರಜ್ವಲ್.ಟಿ.ಎ | BWSSB Wall Man |
| 15 | ವಾರ್ಡ್ 196 ರ L.I.C ಕಾಲೋನಿ ಸ್ಥಳಿಯ ನಿವಾಸಿಗಳ ಸಂಘ ಹಾಗೂ 4ನೇ ಟಿ ಬ್ಲಾಕ್‌ನ ಸ್ಥಳಿಯ ನಿವಾಸಿಗಳ ಸಂಘ ಮತ್ತು ಸಾರ್ವಜನಿಕರು | |

ವಾರ್ಡ್ ಸಮಿತಿ ಅದ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತ ಕೋರುತ್ತಾ , ಸಭೆಯನ್ನು ಪ್ರಾರಂಭಿಸಿದರು.

1. ಮಾನ್ಯ ನೋಡಲ್ ಅಧಿಕಾರಿಗಳು ಮಾತನಾಡುತ್ತಾ ದಿನಾಂಕ 23.11.2022 ರಂದು ಸಾರ್ವಜನಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಹಾಗೂ ಅಧಿಕಾರಿಗಳು ತೆಗೆದುಕೊಂಡ ಕ್ರಮದ ಮಾಹಿತಿ ಪಡೆದುಕೊಂಡರು.

2. ವಾರ್ಡ್-196 (ಹೊಸ) ವ್ಯಾಪ್ತಿಯರಲ್ಲಿರುವ 10ನೇ ಅಡ್ಡರಸ್ತೆಯಲ್ಲಿ Shoulder drain ಮಾಡಿದ್ದು, ಆದರೆ Shoulder drain ಗಳಿಗೆ Steel Grating ಅಳವಡಿಸಿರುದಿಲ್ಲ ಮತ್ತು ಇನ್ನು ಅನೇಕ ಕಡೆ Shoulder drain ನಿರ್ಮಾಣ ಮಾಡುವಂತೆ ಸಭೆಯಲ್ಲಿ ಕೋರಿದರು. (ಕ್ರಮ: ಸ.ಕಾ.ನಿ.ಅ, **SWD (South)**, ಬಿ.ಬಿ.ಎಂ.ಪಿ)

Scanned with OKEN Scanner

3. ವಾರ್ಡ್–196 (ಹೊಸ) ವ್ಯಾಪ್ತಿಯರಲ್ಲಿರುವ 28ನೇ ಮುಖ್ಯರಸ್ತೆಯ (ವಿಷ್ಣುವರ್ಧನ್ ಪಾರ್ಕನ) ರಸ್ತೆಯ ಎರಡು ಬದಿ ವಾಹನಗಳನ್ನು ನಿಲ್ಲಿಸುವುದರಿಂದ ವಾಹನ ಒಡಡಲು ತುಂಬಾ ತೊಂದರೆಯಾಗುತ್ತಿದ್ದು. ಇದರ ಬಗ್ಗೆ ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಮೈಕೊ ಲೇಔಟ್ ಸಂಚಾರ ಪೋಲಿಸ್ ಠಾಣೆ)**

4. ವಾರ್ಡ್–196 (ಹೊಸ) ವ್ಯಾಪ್ತಿಯರಲ್ಲಿರುವ 10ನೇ ಅಡ್ಡರಸ್ತೆಯಲ್ಲಿ Strom water drain (SWD) ಮೇಲೆ ವಾಹನಗಳನ್ನು ಪಾರ್ಕ ಮಾಡುತ್ತಿದ್ದು. ಇದರಿಂದ ಪಾದಚಾರಿ ಮಾರ್ಗದ ಮೇಲೆ ಸಾರ್ವಜನಿಕರು ಓಡಾಡಲು ತುಂಬಾ ತೊಂದರೆಯಾಗುತ್ತಿದ್ದು. ಇದರ ಬಗ್ಗೆ ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಮೈಕೊ ಲೇಔಟ್ ಸಂಚಾರ ಪೋಲಿಸ್ ಠಾಣೆ)**

5. ವಾರ್ಡ್–196 (ಹೊಸ) ವ್ಯಾಪ್ತಿಯ ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ವಿಷ್ಣುವರ್ಧನ್ ಪಾರ್ಕನಲ್ಲಿ ಹೊಸದಾಗಿ ಮಳೆ ನೀರಿನ ಇಂಗು ಗುಂಡಿ (Rain water Harvesting pits) ಅನ್ನು ನಿರ್ಮಿಸಲು ಸಭೆಯಲ್ಲಿ ಕೋರಿದರು. **(ತೋಟಗಾರಿಕೆ ಇಲಾಖೆ (ದಕ್ಷಿಣ) ಮತ್ತು ಯೋಜನೆ(ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

6. ವಾರ್ಡ್–196 (ಹೊಸ) ವ್ಯಾಪ್ತಿಯ LIC Colony ಮತ್ತು ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ವಿಷ್ಣುವರ್ಧನ್ ಪಾರ್ಕನಲ್ಲಿರುವ ಬೀದಿ ದೀಪಗಳು, ಗೊಂಬೆಗಳು ಮತ್ತು Music System ಹಾಳಾಗಿದ್ದು. ಬೀದಿ ದೀಪಗಳು ಇಲ್ಲದೆ ಇರುವುದರಿಂದ ಸಂಜೆ ಮತ್ತು ಮುಂಜಾನೆ ಸಮಯದಲ್ಲಿ ಸಾರ್ವಜನಿಕರಿಗೆ ಓಡಡಲು ತೊಂದರೆಯಾಗುತ್ತಿದ್ದು. ಕೂಡಲೇ ಬೀದಿ ದೀಪಗಳನ್ನು ಅಳವಡಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, ವಿದ್ಯುತ್ (ದಕ್ಷಿಣ) ಇಲಾಖೆ, ಜಯನಗರ, ಬಿ.ಬಿ.ಎಂ.ಪಿ ಮತ್ತು ತೊಟಗಾರಿಕೆ (ದಕ್ಷಿಣ) ಇಲಾಖೆ ಜಯನಗರ)**

7. ವಾರ್ಡ್–196ರ (ಹೊಸ) ವ್ಯಾಪ್ತಿಯ ವ್ಯಾಪ್ತಿಯಲ್ಲಿರುವ ಜಯನಗರ 4ನೇ 'ಟಿ' ಬ್ಲಾಕ್‌ನ 32ನೇ 'ಇ' ಅಡ್ಡರಸ್ತೆಯಲ್ಲಿ ವಾರಸುದಾರರಿಲ್ಲದ (ಬಿಡಾಡಿ) ವಾಹನಗಳಿದ್ದು. ಸದರಿ ವಾಹನಗಳನ್ನು ತೆರೆವುಗೂಳ್ಳಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, ಜಯನಗರ ಉಪ–ವಿಭಾಗ ಬಿ.ಬಿ.ಎಂ.ಪಿ & ಕ್ರಮ: ಮೈಕೊ ಲೇಔಟ್ ಸಂಚಾರ ಪೋಲಿಸ್ ಠಾಣೆ)**

8. ವಾರ್ಡ್–196 (ಹೊಸ) ವ್ಯಾಪ್ತಿಯ LIC Colony ಯಲ್ಲಿನರುವ ನಿವೇಶನಗಳಿಂದ ಬರುವ ಕಸದ ಪ್ರಮಾಣವು ಹೆಚ್ಚಾಗುತ್ತಿದ್ದು, ಕಸ ವಿಲೇವಾರಿ ಮಾಡಲು ತುಂಬಾ ತೋಂದರೆಯಾಗುತಿರುತ್ತದೆ. ಆದ್ದರಿಂದ ಕಸವನ್ನು ವಿಲೇವಾರಿ ಮಾಡುವ ಸದರಿ ವಾಹನದ ಜೊತೆಗೆ ಇನ್ನೋಂದು ಹೆಚ್ಚುವರಿ ವಾಹನವನ್ನು ನೀಡಲು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, SWM ಜಯನಗರ, ಬಿ.ಬಿ.ಎಂ.ಪಿ)**

9. ವಾರ್ಡ್–196 (ಹೊಸ) ವ್ಯಾಪ್ತಿಯ LIC Colony ಮತ್ತು ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ವಿಷ್ಣುವರ್ಧನ್ ಪಾರ್ಕನಲ್ಲಿ ಸೊಳ್ಳೆಗಳು ತುಂಬಾ ಹೆಚ್ಚಾಗಿದ್ದು , ಪಾರ್ಕಗಳಲ್ಲಿನ ಸೊಳ್ಳೆಗಳನ್ನು ನಿಯಂತ್ರಿಸಲು ಸೊಳ್ಳೆ ಔಷದಿಯನ್ನು ಸಿಂಪಡಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಆರೋಗ್ಯಾಧಿಕಾರಿಗಳು, ಬಿ.ಬಿ.ಎಂ.ಪಿ ಜಯನಗರ)**

Scanned with OKEN Scanner

10. ವಾರ್ಡ ಸಂಖ್ಯೆ 196ರ ವ್ಯಾಪ್ತಿಯಲ್ಲಿರುವ LIC ಕಾಲೋನಿಯಲ್ಲಿನ ರಸ್ತೆ ಬಂದಿ ಚರಂಡಿಯಲ್ಲಿನ ಹೂಳು ತೆಗೆಯುವುದು ಮತ್ತು G.H ಲೇಔಟ್‌ನಲ್ಲಿ ರಸ್ತೆ ಬಂದಿ ಚರಂಡಿಯನ್ನು ಹೊಸದಾಗಿ ನಿರ್ಮಾರ್ಣ ಮಾಡಲು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, ಜಯನಗರ ಉಪ-ವಿಭಾಗ ಬಿ.ಬಿ.ಎಂ.ಪಿ)**

11. ವಾರ್ಡ-196 ರ ವ್ಯಾಪ್ತಿಯ SWD ವತಿಯಿಂದ ನಿರ್ಮಾಣ ಮಾಡಿರುವ ರಾಜಕಾಲುವೆಯು ಬೈರಸಂದ್ರ ಬಸ್ ನಿಲ್ದಾಣದ ಹತ್ತಿರ ಬ್ಲಾಕ್ ಆಗುತ್ತಿದ್ದು. ಕೂಡಲೇ ಸದರಿ ಸಮಸ್ಯೆಯನ್ನು ಬಗೆಹರಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, SWD (South), ಬಿ.ಬಿ.ಎಂ.ಪಿ)**

12. ವಾರ್ಡ-196 (ಹೊಸ) ವ್ಯಾಪ್ತಿಯ ರಸ್ತೆ ಮತ್ತು ಮರಗಳಲ್ಲಿ ನೇತಾಡುತ್ತಿರುವ ಕೇಬಲ್ (Overhanging Cabels) ಗಳಿಂದ ಸಾರ್ವಜನಿಕರ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿದು. ಕೂಡಲೇ ನೇತಾಡುತ್ತಿರುವ ಕೇಬಲ್ (Overhanging Cabels) ಗಳನ್ನು ಕತ್ತರಿಸಿ ತೆಗೆಯುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, ಜಯನಗರ ಉಪ-ವಿಭಾಗ ಬಿ.ಬಿ.ಎಂ.ಪಿ)**

13. ವಾರ್ಡ-196 (ಹೊಸ) ವ್ಯಾಪ್ತಿಯ LIC Colony ಮಳೆಗಾಲದಲ್ಲಿ ನಿವೇಶನಗಳಿಗೆ ನೀರು ನುಗ್ಗಿ ತುಂಬಾ ತೊಂದರೆಯಾಗುತ್ತಿದ್ದು. ಸದರಿ ಸಮಸ್ಯೆ ಬಗ್ಗೆ ಹರಿಸಲು ಮತ್ತು ಗಣೇಶ ದೇವಸ್ಥಾನ ಹತ್ತಿರ ರಾಜಕಾಲುವೆ ಅಗಲಿಕರ ಕಾಮಗಾರಿಯನ್ನು ಮುಂದುವರೆಸಲು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, SWD (South), ಬಿ.ಬಿ.ಎಂ.ಪಿ)**

**ನಿರ್ಣಯ:** ಕೊನೆಯದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ವರದಿ ಮಾಹಿತಿಯನ್ನು ಒದಗಿಸಬೇಕೆಂದು ಕಾರ್ಯದರ್ಶಿ ಮತ್ತು ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ ಚಂದ್ರಶೇಖರ್.ವಿ)
ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್ ಸಮಿತಿ ಸಭೆ
ಹೊಸ ವಾರ್ಡ-196 ಬೈರಸಂದ್ರ (ಹಳೆಯ ವಾರ್ಡ 168&169)

(ಶ್ರೀ ವಾಲು ರಾಥೋಡ್)
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ ಸಭೆ
ಹೊಸ ವಾರ್ಡ-196 ಬೈರಸಂದ್ರ (ಹಳೆಯ ವಾರ್ಡ 168&169)

ಪ್ರತಿಯನ್ನು:

1. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
2. ಮಾನ್ಯ ವಲಯ ಆಯುಕ್ತರು (ದಕ್ಷಿಣ), ಬಿ.ಬಿ.ಎಂ.ಪಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ಕಛೇರಿ ಕಡತಕ್ಕೆ.

Scanned with OKEN Scanner